(ಆ) ಬೆಂಗಳೂರು-ಮಿರಜ್ ರೈಲು ಮಾರ್ಗದ ಮೀಟರ್‌ಗೇಜನ್ನು ಬ್ರಾಡ್‌ಗೇಜ್‌ಗೆ ಪರಿವರ್ತಿಸಲು ಸಮೀಕ್ಷೆಯನ್ನು ರೈಲ್ವೆಯವರು ೮೦-೮೧ರಲ್ಲಿ ಕೈಗೆತ್ತಿಕೊಂಡು ೧೯೪೪ರಲ್ಲಿ ಮುಗಿಸಿದರು. ಈ ಯೋಜನೆಯು ಆರ್ಥಿಕವಾಗಿ ಲಾಭದಾಯಕವಾಗಿಲ್ಲವಾದ್ದರಿಂದ ಈ ಪರಿವರ್ತನೆಯನ್ನು ಫಲನೆಯ ಯೋಜನೆಯಲ್ಲಿ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರದವರು ತಿಳಿಸಿದ್ದಾರೆ. ಈ ಮಾರ್ಗವನ್ನು ವಿದ್ಯುತ್ ರೈಲನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದವರು ಬ್ರಾಡ್‌ಗೇಜನ್ನು ಮಾಡಲು ಒಪ್ಪಿದ ಮೇಲೆ ತೆಗೆದುಕೊಳ್ಳಲಾಗುವುದು.

ಸಾಗರ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರ ಕೊರತೆಯ ಬಗ್ಗೆ

೧೬೯ (೫೨೭) ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

(ಆ) ಸಾಗರ ತಾಲ್ಲೂಕಿನಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದ್ದು ಹಾಗೂ ಹೊಸದಾಗಿ ಶಾಲೆಗಳನ್ನು ಸಹ ಪ್ರಾರಂಭಿಸಿರುವುದರಿಂದ ಅಲ್ಲಿಗೆ ಸುಮಾರು ೫೦ ರಿಂದ ೬೦ ಉಪಾಧ್ಯಾಯರು ಬೇಕಾಗಿರುವರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

(ಆ) ಕಳೆದ ವರ್ಷದಿಂದ ಜಿಲ್ಲಾ ನೇಮಕಾತಿ ಸಮಿತಿಗಳನ್ನು ರಚಿಸುತ್ತೇವೆಂದು ಹೇಳಿ, ಇನ್ನೂ ರಚಿಸದೇ ಈಗಾಗಲೇ ಖಾಲಿ ಇರುವ ಜಾಗಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳು ನಡೆಯಲು ಅವಕಾಶವಿಲ್ಲದಂತಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

(ಇ) ಹಾಗಿದ್ದಲ್ಲಿ ಸರ್ಕಾರದವರು ಕೂಡಲೇ ಹಂಗಾಮಿ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಲು ಸಹಾಯಕ ವಿದ್ಯಾಧಿಕಾರಿಗಳಿಗೆ ಆಜ್ಞೆ ಮಾಡಿ ಶಾಲೆಗಳು ನಡೆಯುವಂತಾಗಲು ಕ್ರಮ ತೆಗೆದುಕೊಳ್ಳಲಾಗುವುದೆ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

(ಆ) ಹೌದು.

(ಆ) ಜಿಲ್ಲಾ ಆಯ್ಕೆ ಸಮಿತಿಗಳ ರಚನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಖಾಲಿ ಇರುವ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲಿನ ಅಭ್ಯರ್ಥಿಗಳಿಂದ ತುಂಬಿ ಶಾಲೆಗಳನ್ನು ನಡೆಸಲು ಕ್ರಮ ತೆಗೆದುಕೊಳ್ಳಲಾಗಿದೆ.

(ಇ) ಜಿಲ್ಲಾ ಆಯ್ಕೆ ಸಮಿತಿಗಳ ಮೂಲಕ ಶಿಕ್ಷಕರ ನೇಮಕಾತಿ ನಡೆಸಲು ವ್ಯವಸ್ಥೆ ಮಾಡಲಾಗುತ್ತಿದ್ದು ಶಿಕ್ಷಕರ ನೇಮಕಾತಿ ತೀಕ್ಷ್ರವಾಗಿಯೇ ಮಾಡಲಾಗುವುದು.

ಮಿಲ್ಸನ್ ಗಾರ್ಡನ್ ಹಾಗೂ ರಾಜಾಜಿನಗರದಲ್ಲಿರುವ ಲೋಕೋಪಯೋಗಿ ಇಲಾಖೆ ನೌಕರರ ವಸತಿ ಗೃಹಗಳ ಬಗ್ಗೆ

೧೭೦ (೫೬೬) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಲೋಕೋಪಯೋಗಿ, ಆಡಳಿತ ಪುನರ್ವಸತಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

(ಆ) ೧೯೪೪ರಿಂದ ಇದುವರೆವಿಗೂ ಸರ್ಕಾರಿ ನೌಕರರಿಂದ ಮಿಲ್ಸನ್ ಗಾರ್ಡನ್ ಹಾಗೂ ರಾಜಾಜಿನಗರದಲ್ಲಿರುವ ಲೋಕೋಪಯೋಗಿ ಇಲಾಖೆ ವಸತಿ ಗೃಹಗಳಿಗೆ ಹಂಚಿಕೆ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

(ಆ) ಹಾಗಿದ್ದಲ್ಲಿ ಸದರಿ ಅರ್ಜಿಗಳಲ್ಲಿ ಎಷ್ಟು ವಸತಿಗಳನ್ನು ಹಂಚಿಕೆಯಾಗಿದೆ ಹಾಗೂ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು?

(ಇ) ಹಾಗಿದ್ದಲ್ಲಿ ಸದರಿ ವಸತಿ ಗೃಹಗಳನ್ನು ಹಂಚುವಾಗ ಅನುಸರಿಸಿದ ನಿಯಮಾವಳಿಗಳಾವುವು? (ಸದರಿ ಪಟ್ಟಿ ಒದಗಿಸುವುದು)

(ಈ) ಸದರಿ ಗೃಹಗಳನ್ನು ಹಂಚುವ ಸಂದರ್ಭದಲ್ಲಿ ವಿಶೇಷ ಆದ್ಯತೆ ಕೊಡುವ ಬಗ್ಗೆ ಏನಾದರೂ ನಿಯಮಾವಳಿ ಇರುವುದೇ?